## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ.**416/2022** ಡಿ.ಡಬ್ಲೂ .1

ದಿನಾಂಕಃ 18-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ವಾದಿಗಳ ಪರ ವಕೀಲರಿಂದಃ-

ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತೇನೆ ಎಂದು ಗೊತ್ತು. ಸರ್ವೆ ನಂ. 6/2 ರಲ್ಲಿ 26 ಗುಂಟೆ ಜಮೀನನ್ನು ನನ್ನ ಅಜ್ಜಿ ಮುನಿಯಮ್ಮ ಖರೀದಿ ಮಾಡಿಲ್ಲ ಎಂದರೆ ಸಾಕ್ಷಿ ಸರ್ವೆ ನಂ. 6 ರಲ್ಲಿ 39 ಗುಂಟೆ ಖರೀದಿ ಮಾಡಿದ್ದು, ಅದು ಪೋಡಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಮುನಿಯಮ್ಮನವರು ಸರ್ವೆ ನಂ. 6 ರಲ್ಲಿ 39 ಗುಂಟೆ ಜಮೀನನ್ನು 1936 ರಲ್ಲಿ ಖರೀದಿಸಿರುತ್ತಾರೆ. 1976 ರಲ್ಲಿ ಸದರಿ ಜಮೀನು ಪೋಡಿಯಾಗಿ ನನ್ನ ತಂದೆ ಹೆಸರಿಗೆ 26 ಗುಂಟೆ ಬಂದಿರುತ್ತದೆ. ಸದರಿ ಪೋಡಿ ಅಣ್ಣ-ತಮ್ಮಂದಿರ ನಡುವೆ ಆದ ವಿಭಾಗದಿಂದ ಆಗಿರುತ್ತದೆ. 1976 ಕ್ಕೂ ಮೊದಲು ಸದರಿ ಆಸ್ತಿಯ ಖಾತೆ ಮುನಿಯಮ್ಮನವರ ಹೆಸರಿನಲ್ಲಿ ಬರುತ್ತಿತ್ತು. ಆ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ದಾವಾ ಆಸ್ತಿಯ ನಿಜವಾದ ಚೆಕ್ಕುಬಂದಿ ಪೂರ್ವಕ್ಕೆ- ನನ್ನ ದೊಡ್ಡಪ್ಪನಾದ ವೆಂಕಟಪ್ಪನವರ ಜಮೀನು, ಪಶ್ಚಿಮಕ್ಕೆ- ವೆಂಕಟಪ್ಪ ಮತ್ತು ಕೃಷ್ಣಪ್ಪನವರ ಜಮೀನು, ಉತ್ತರಕ್ಕೆ- ಗುಂಡು ತೋಪು, ದಕ್ಷಿಣಕ್ಕೆ- ಶಂಕರಪ್ಪನವರು ಜಮೀನು ಇದೆ. ಸದರಿ ಚೆಕ್ಕುಬಂದಿಗೆ ಸಂಬಂಧಿಸಿದ ದಾಖಲೆ ಇದೆ. ಹಾಜರು ಮಾಡುತ್ತೇನೆ.

ವಾದಿಯರು ನನ್ನ ಸಂಬಂಧಿಗಳಲ್ಲ. ಸರ್ವೆ ನಂ. 6 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದು ತಿಳಿದುಕಿಕೊಂಡಿಲ್ಲ. 1936 ರಿಂದ ದಾವಾ ಆಸ್ತಿಯಲ್ಲಿ ನಾವೇ ಸ್ವಾದೀನದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀನೆ. ದಾವಾ ಆಸ್ತಿಯ ಖಾತೆ ನಿಪಿ. 5 ರಿಂದ 7 ರ ಪಹಣಿಯಂತೆ ವಾದಿಯರ ತಾತ ಚಿಕ್ಕಮುನಿಕೆಂಪಣ್ಣನವರ ಹೆಸರಿನಲ್ಲಿದೆ ಎಂದರೆ ಸದರಿ ದಾಖಲೆಯನ್ನು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಸರ್ವೆ ನಂ. 6 ನ್ನು ಮಾತ್ರ ಖರೀದಿ

ಮಾಡಿದ್ದು, ಸರ್ವೆ ನಂ. 6/2 ನ್ನು ಅಲ್ಲ ಎಂದರೆ ಸಾಕ್ಷಿ ನಾವು ಸರ್ವೆ ನಂ. 6 ನ್ನು ಖರೀದಿ ಮಾಡಿದ್ದು, ಅದು ಪೋಡಿಯಾಗಿ ಸರ್ವೆ ನಂ. 6/2 ಎಂದು ಆಗಿದ್ದು, ವಾದಿಯರಿಗೆ ಅಲ್ಲಿ ಯಾವುದೇ ಜಮೀನು ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 6 ರ 39 ಗುಂಟೆ ಜಮೀನಿನಲ್ಲಿ 26 ಗುಂಟೆ ನನ್ನ ತಂದೆ ಗೋವಿಂದಪ್ಪನವರ ಹೆಸರಿಗೆ ಮತ್ತು ಉಳಿಕೆ ಜಮೀನು ನನ್ನ ತಂದೆಯ ಅಣ್ಣ-ತಮ್ಮಂದಿರ ಹೆಸರಿಗೆ 1976 ರ ವಿಭಾಗದ ಮೂಲಕ ಹೋಗಿರುತ್ತದೆ. ನನ್ನ ತಂದೆಯ ಅಣ್ಣ-ತಮ್ಮಂದಿರ ಹೆಸರಿಗೂ ಸಹ ಸರ್ವೆ ನಂ. 6 ರಲ್ಲಿ ತಲಾ 26 ಗುಂಟೆ ಜಮೀನು ಹೋಗಿರುತ್ತದೆ. ನನ್ನ ಅಜ್ಜಿ ಮುನಿಯಮ್ಮನವರನ್ನು ಹೊರುಪಡಿಸಿ ಸರ್ವೆ ನಂ. 6 ರಲ್ಲಿ ಬೇರೆ ಯರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ದೊಡ್ಡಪ್ಪನಾದ ವೆಂಕಟಪ್ಪನವರು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾವಾಗ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಕ್ರಯ ಪತ್ರಗಳನ್ನು ಹಾಜರು ಮಾಡಲು ತೊಂದರೆ ಇಲ್ಲ.

ದಿನಾಂಕಃ 17-07-1957 ರಲ್ಲಿ ವಾದಿಯ ತಾತ ಚಿಕ್ಕಮುನಿಕೆಂಪಣ್ಣನವರು ಸಹಕಾರಿ ಸಂಘ, ದೊಡ್ಡಹುಲ್ಲೂರು ರವರಿಗೆ ಆಧಾರ ಮಾಡಿದ್ದರು ಎಂದರೆ ಸುಳ್ಳು.ಸದರಿ ಆಧಾರದ ಸಾಲವನ್ನು ತೀರಿಸಲು ಚಿಕ್ಕಮುನಿಕೆಂಪಣ್ಣನವರು ಸರ್ವೆ ನಂ. 6/2 ರ 26 ಗುಂಟೆ ಜಮೀನನ್ನು ಶ್ರೀಕಂಠಯ್ಯ ಎಂಬುವವರಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸುಳ್ಳು. ನಂತರ ದಿನಾಂಕಃ 10-01-1964 ರಂದು ಚಿಕ್ಕಮುನಿಕೆಂಪಣ್ಣನವರ ಮಗ ನಾಗಪ್ಪ ರವರು ಶ್ರೀಕಂಠಯ್ಯನವರಿಂದ ಸದರಿ ಜಮೀನನ್ನು ಪುನಃ ಖರೀದಿಸಿರುತ್ತಾರೆ ಎಂದರೆ ಸುಳ್ಳು. ದಿನಾಂಕಃ 29-01-1964 ರಂದು ನಾಗಪ್ಪನವರು ನಾರಾಯಣಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ದಿನಾಂಕಃ 11-09-1978 ರಲ್ಲಿ ನಾಗಪ್ಪನವರು ನಾರಾಯಣಪ್ಪನವರಿಂದ 26 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸುಳ್ಳು. ದಿನಾಂಕಃ 11-09-1978 ರಿಂದ ಇಲ್ಲಿಯ ವರೆಗೂ ಸರ್ವೆ ನಂ. 6/2 ರಲ್ಲಿ 26 ಗುಂಟೆ ಜಮೀನನ್ನು ನಾಗಪ್ಪ ಮತ್ತು ಅವರ ಕುಟುಂಬದವರು ಬೇರೆ ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸುಳ್ಳು. ನಿಡಿ. 4 ರ ದಿನಾಂಕಃ 30-09-1976 ರ ವಿಭಾಗ ಪತ್ರದ ಮೂಲಕ ಸರ್ವೆ ನಂ. 6/2

ನನ್ನ ತಂದೆ ಗೋವಿಂದಪ್ಪನವರಿಗೆ ಹಿಸ್ಸೆಯಾಗಿ ಬಂದಿರುತ್ತದೆ. ಸದರಿ ದಾಖಲೆಯಲ್ಲಿ ಸರ್ವೆ ನಂ. 6/2 ಕ್ಕೆ ಏನು ಚೆಕ್ಕುಬಂದಿ ನಮೂದಿಸಿರುತ್ತಾರೆಂದು ಗೊತ್ತು. ಸದರಿ ಚೆಕ್ಕುಬಂದಿ ಪೂರ್ವಕ್ಕೆ- ನನ್ನ ದೊಡ್ಡಪ್ಪನಾದ ವೆಂಕಟಪ್ಪನವರ ಜಮೀನು, ಪಶ್ಚಿಮಕ್ಕೆ- ವೆಂಕಟಪ್ಪ ಮತ್ತು ಕೃಷ್ಣಪ್ಪನವರ ಜಮೀನು, ಉತ್ತರಕ್ಕೆ- ಗುಂಡು ತೋಪು, ದಕ್ಷಿಣಕ್ಕೆ- ಶಂಕರಪ್ಪನವರು ಜಮೀನು ಬರುತ್ತದೆ.

ದಿನಾಂಕಃ 11-09-1978 ರ ವರೆಗೂ ನಾರಾಯಣಪ್ಪನವರ ಹೆಸರಿನಲ್ಲಿದ್ದ ಸರ್ವೆ ನಂ. 6/2 ರ 26 ಗುಂಟೆ ಜಮೀನನ್ನು ನಾವು ನಿಡಿ. 4 ರ ಮೂಲಕ ವಿಭಾಗ ಮಾಡಿಕೊಳ್ಳಲು ಯಾವುದೆ ಹಕ್ಕು ಇರಲಿಲ್ಲ ಎಂದರೆ ಸುಳ್ಳು. ನಿಡಿ. 42 ರಿಂದ 44 ರಂತೆ ನನ್ನ ತಂದೆ ಸರ್ವೆ ನಂ. 6 ಕ್ಕೆ ಮಾತ್ರ ಕಂದಾಯ ಪಾವತಿಸಿರುತ್ತಾರೆ ಎಂದರೆ ಹೌದು. ಅವರು ಸರ್ವೆ ನಂ. 6/2 ಕ್ಕೆ ಕಂದಾಯ ಪಾವತಿಸಿಲ್ಲ ಎಂದರೆ ಸರಿಯಲ್ಲ. ಸದರಿ ಕಂದಾಯ ಪಾವತಿಸಿದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ.

ನಾವಾಗಲೀ, ನನ್ನ ತಂದೆಯಾಗಲೀ ದಾವಾ ಆಸ್ತಿಗೆ ಯಾವತ್ತೂ ಮಾಲೀಕರಲ್ಲ ಎಂದರೆ ಸುಳ್ಳು. ನಾವು ಅಣ್ಣ-ತಮ್ಮಂದಿರು 2014 ರಲ್ಲಿ ಭಾಗಕ್ಕಾಗಿ ದಾವೆ ಸಲ್ಲಿಸಿದ್ದೇವು. ಸದರಿ ದಾವೆ ರಾಜೀ ಡಿಕ್ರೀ ಯಾಗಿರುತ್ತದೆ. ಸದರಿ ದಾವೆಯಲ್ಲಿ ನಮ್ಮ ತಂದೆಗೆ ಸೇರಿದ 1976 ರ ವಿಭಾಗದ ಮೂಲಕ ಬಂದ ಮತ್ತು ಬೇರೆ ಎಲ್ಲಾ ಆಸ್ತಿಗಳನ್ನು ಸೇರಿಸಿರುತ್ತೇವೆ. ಸದರಿ ರಾಜೀ ಡಿಕ್ರೀ ಮೂಲಕ ಪ್ರತಿವಾದಿಗಳಾದ ನಾವು 4 ಜನರಿಗೂ ಭಾಗ ಮಾಡಿಕೊಂಡಿದ್ದು, 1 ಮತ್ತು 2 ನೇ ಪ್ರತಿವಾದಿಗೆ ತಲಾ 1 ಗುಂಟೆ ಮತ್ತು 3 ನೇ ಪ್ರತಿವಾದಿಯಾದ ನನಗೆ ಮತ್ತು 4 ನೇ ಪ್ರತಿವಾದಿಗೆ ತಲಾ 12 ಗುಂಟೆ ಜಮೀನು ಬಂದಿರುತ್ತದೆ.

ಮುಂದೂವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.